**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ 702/2017
ಸಿಡಬ್ಲೂ-15
ಪಿ.ಡಬ್ಲ್ಯೂ-11

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬಸವರಾಜ ಬಲಕಲ್ಲ |
| ತಂದೆಯ ಹೆಸರು | ಃ | ಗುರುನಾಥ |
| ವಯಸ್ಸು | ಃ | 43 ವರ್ಷ, |
| ಉದ್ಯೋಗ | : | ಮುಖ್ಯ ಪೇದೆ ತಾಳಿಕೋಟಿ ಪಿ.ಎಸ್ |
| ವಾಸಸ್ಥಳ | ಃ | ತಾಳಿಕೋಟಿ |

(ದಿಃ11/03/2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ಪ್ರಸ್ತುತ ಪ್ರಕರಣದ ಘಟನೆ ನಡೆದಾಗ ತಾಳಿಕೋಟಿ ಪಿ.ಎಸ್ ನಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17.7.2017 ರಂದು ರಾತ್ರಿ 8.30 ಗಂಟೆಯಿಂದ 10.00 ಗಂಟೆಯವರೆಗೆ ಚಾಸಾ 16 ರವರು ಹೇಳಿದಂತೆ ತಾಳಿಕೋಟಿ ಸರ್ಕಾರಿ ಆಸ್ಪತ್ರೆಯಲ್ಲಿ ಶವ ಪಂಚನಾಮೆಯನ್ನು ಬರೆದಿರುತ್ತೇನೆ. ಆ ಕಾಲಕ್ಕೆ ಚಾಸಾ 16 ರವರು ಒಂದು ಪೋಟೋ ತೆಗೆದಿರುತ್ತಾರೆ.

ಸದರಿ ಪೋಟೋದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ 2 ಗುರ್ತಿಸಲಾಗಿದೆ.

ದಿನಾಂಕ 18.7.2017 ರಂದು ಮುಂಜಾನೆ 11.00 ಗಂಟೆಯಿಂದ 12.00 ಗಂಟೆಯವರೆಗೆ ಚಾಸಾ 17 ರವರು ಹೇಳಿದಂತೆ ಘಟನಾ ಸ್ಥಳದಲ್ಲಿ ಘಟನಾ ಸ್ಥಳ ಪಂಚನಾಮೆಯನ್ನು ಬರೆದು ದಸ್ತುರ ಹಾಕಿ ಸಹಿ ಮಾಡಿರುತ್ತೇನೆ. ಆ ಕಾಲಕ್ಕೆ ಚಾಸಾ 17 ರವರು ಎರಡು ಪೋಟೋ ತೆಗೆದಿರುತ್ತಾರೆ.

ಸಾಕ್ಷಿಯು ಗುನ್ನಾ ಜಾಗೆ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಅದನ್ನು ಈಗಾಗಲೇ ನಿಪಿ 5 ಎಂದು ಗುರ್ತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 5(ಬಿ) ಎಂದು ಗುರ್ತಿಸಲಾಯಿತು. ಆ ಕಾಲಕ್ಕೆ ತೆಗೆದ ಪೋಟೋದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರ್ತಿಸಿದ್ದು ಒಂದು ಪೋಟೋವನ್ನು ಈಗಾಗಲೇ ನಿಪಿ 7 ಎಂದು ಗುರ್ತಿಸಲಾಗಿದ್ದು, ಇನ್ನೊಂದು ಪೋಟೋವನ್ನು ತಕರಾರಿಗೆ ಒಳಪಟ್ಟು ನಿಪಿ 11 ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ವಾಯ್.ಎನ್ ವಕೀಲರಿಂದ</u>**

ಘಟನೆ ನಡೆದ ಮರುದಿನ ಘಟನಾ ಸ್ಥಳಕ್ಕೆ ನಾವು ಪಂಚನಾಮೆಗೆ ಹೋಗಿರುತ್ತೇವೆ. ದಿನಾಂಕ 18.7.2017 ರಂದು ಮುಂಜಾನೆ 11.00 ಗಂಟೆಯಿಂದ 12.00 ಗಂಟೆಯವರೆಗೆ ಚಾಸಾ 17 ರವರು ಹೇಳಿದಂತೆ ಘಟನಾ ಸ್ಥಳದಲ್ಲಿ ಘಟನಾ ಸ್ಥಳ ಪಂಚನಾಮೆಯನ್ನು ಬರೆದು ದಸ್ತುರ ಹಾಕಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಚಾಸಾ 17 ರವರು ಎರಡು ಪೋಟೋ ತೆಗೆದಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನ ಸ್ಥಳದ ಚಕಬಂದಿ ಪೂರ್ವಕ್ಕೆ ಬಸವಣ್ಣನ ಕಟ್ಟೆ, ಪಶ್ಚಿಮಕ್ಕೆಃ ಹೊಂಡ , ಉತ್ತರಕ್ಕೆಃ ಸೈದಪ್ಪನ ಗುಡಿಗೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೆ ಃ ಕೊಡಗಾನೂರ ಮತ್ತು ಗುಂಡಕನಾಳ ರಸ್ತೆ ಅಂತಾ ಇರುತ್ತದೆ. ಸದರಿ ಚಕಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೇ ಘಟನಾ ಸ್ಥಳದ ಪಂಚನಾಮೆ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚರನ್ನು ಚಾಸಾ 17 ರವರು ಗುಂಡಕನಾಳ ಗ್ರಾಮದಿಂದ ಕರೆಸಿರುತ್ತಾರೆ. ಆದರೆ ನನಗೆ ಪಂಚರ ಹೆಸರು ಗೊತ್ತಿರುವುದಿಲ್ಲ. ಪಂಚರಿಗೆ ಘಟನೆಯ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹಿತ ಅವರು ಠಾಣೆಗೆ ಬಂದಾಗ ಒತ್ತಾಯಪೂರ್ವಕವಾಗಿ ಅವರ

ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಾವು ಒಟ್ಟು 5 ಜನ ಇದ್ದೇವು. ಪಂಚನಾಮೆ ಕಾಲಕ್ಕೆ 5 ಜನ ಇದ್ದೇವು ಮತ್ತು ಘಟನಾ ಸ್ಥಳದಲ್ಲಿ ಚಾಸಾ 17 ರವರು ಪಂಚನಾಮೆ ಜರುಗಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಕರಣದಲ್ಲಿ ತನಿಖಾಧಿಕಾರಿಯಾಗಿ ಎಂ.ಬಿ.ಬಿರಾದಾರರವರು, ಕೆ.ಎಸ್. ಹಟ್ಟಿಯವರು ಮತ್ತು ರವಿಕುಮಾರ ಕಪ್ಪತ್ತನವರರವರು ಕರ್ತವ್ಯ ನಿರ್ವಹಿಸಿರುತ್ತಾರೆ. ಚಾಸಾ 16 ರವರು ಹೇಳಿದಂತೆ ಶವಪಂಚನಾಮೆಯನ್ನು ನಾನು ಬರೆದಿದ್ದು, ಚಾಸಾ 17 ರವರು ಹೇಳಿದಂತೆ ಘಟನಾ ಸ್ಥಳ ಪಂಚನಾಮೆ ಬರೆದಿರುತ್ತೇನೆ. ಚಾಸಾ 16 ರವರು ಹೇಳಿದಂತೆ ಶವಪಂಚನಾಮೆಯನ್ನು ನಾನು ಬರೆದಿದ್ದು, ಚಾಸಾ 17 ರವರು ಹೇಳಿದಂತೆ ಘಟನಾ ಸ್ಥಳ ಪಂಚನಾಮೆ ಬರೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆ ಬರೆಯದಿದ್ದರೂ ಸಹಿತ ನನ್ನ ಮೇಲಾಧಿಕಾರಿಗಳ ಮಾತುಕೇಳಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರಿಗೆ ಪರಿಹಾರಧನ ಸಿಗಲು ಅನುಕೂಲ ಮಾಡಿಕೊಡಲೆಂದು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸಹಿತ ನಾನು ಠಾಣೆಯಲ್ಲಿಯೇ ಕುಳಿತು ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾದಂ ಪ್ರ ವರ್ಗ, ಮುದ್ದೇಬಿಹಾಳ.